# ಉತ್ತರಗಳ ಕೀಲಿ

ವಿಷಯ:- ಪ್ರಥಮ ಭಾಷೆ ಕನ್ನಡ.

I
1. ಸಿ. ಅದ್ವರ್ಗ
2. ಡಿ. ಅವಧಾರಣಾರ್ಥಕಾವ್ಯಯ
3. ಎ. ಶ್ಚುತ್ವಸಂಧಿ
4. ಬಿ. ಕರಣಾರ್ಥ
5. ಸಿ. ಮಾಡಿಯಾನು.
6. ಡಿ. ಘಾಸಿ

II
7. ಸೂರ್ಯ
8. ದಿಟ್ಟಿ
9. ಅಂಶಿಸಮಾಸ.
10. ತದ್ಧಿತಾಂತ ಭಾವನಾಮ.

III
11. ಸೇನೆಯಲ್ಲಿದ್ದ ವೈದ್ಯನ ಹೆಸರು ರಾಹಿಲ್.
12. ರಾಮನ ಬರುವಿಕೆಗಾಗಿ ಮತಂಗಾಶ್ರಮದಲ್ಲಿದ್ದವರು, ಶಬರಿ.
13. ನಾಲ್ವಡಿ ಕೃಷ್ಣರಾಜ ಒಡೆಯರು 'ವಿಶ್ವೇಶ್ವರಯ್ಯನವರನ್ನು' ದಿವಾನರನ್ನಾಗಿ ಆಯ್ಕೆ ಮಾಡಿದರು.
14. ಅಶೋಕ ಪೈ ಅವರು ಒಬ್ಬ ಮನೋವೈದ್ಯರು.
15. ಹಕ್ಕಿಯ ಗರಿಯಲ್ಲಿ ಕಪ್ಪು, ಬಿಳಿ, ಕೆಂಪು ಹಾಗೂ ಹೊನ್ನಿನ ಬಣ್ಣಗಳಿವೆ.
16. ದುರ್ಯೋಧನ ತಾನು ಹೋರಾಡುತ್ತಿರುವುದು ನೆಲಕ್ಕೆ ಅಲ್ಲ, ಛಲಕ್ಕೆ ಎಂದು ಭೀಷ್ಮನು ಹೇ
17. ಭಗತ್‌ಸಿಂಗ್‌ಗೆ ಬ್ರಿಟಿಷರ ವಿರುದ್ಧ ಸೇಡು ತೀರಿಸಿಕೊಂಡಿದ್ದಕ್ಕೆ ಮರಣದಂಡನೆ ಶಿಕ್ಷೆಯಾ

IV
18. ಕಾಲಿಗೆ ಗಾಯ ಮಾಡಿಕೊಂಡು ಬಂದ ರಾಹಿಲನನ್ನು ತನ್ನ ಸೊಸೆಯ ಮಲಗಿದ ಕೋಣೆಗೆ ಕಳಿಸಿ ಮಂಚದಡಿಯನ್ನು ತೋರಿಸಿ, ಬಟ್ಟೆ ಸುತ್ತಿದ ನಿರ್ಜೀವ ಶಿಶುವನ್ನು ಬಾಗಿಲ ಬಳಿ ಮಲಗಿಸಿದಳು. ಹೀಗೆ ರಾಹಿಲನನ್ನು ಸೈನಿಕರಿಂದ ರಕ್ಷಿಸಿದಳು.
19. ರಾಮಲಕ್ಷ್ಮಣರನ್ನು ಕಂಡು ಬೇಗನೆ ಹತ್ತಿರಕ್ಕೆ ಬಂದು, ಮೈ ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಕಾಲ್ಗಳಿಗೆ ನೀರಿತ್ತು ಬಗೆಬಗೆಯ ಹೂ ಹಣ್ಣು ಮಾಲೆಯನ್ನು ಕೊರಳಿಗೆ ಹಾಕಿ ಸಂತಸಪಟ್ಟು, ರುಚಿಯಾದ ಹಣ್ಣುಗಳನ್ನು ನೀಡಿ ಅವರನ್ನು ಸತ್ಕರಿಸಿದಳು.
20. ಒಂದ್ಸಲ ಗ್ರಾಮದ ಜನರೆಲ್ಲ ಸೇರಿ ತಮ್ಮ ದೇವತೆಗೆ ಗುಡಿ ಕಟ್ಟಲು ಆರಂಭಿಸುತ್ತಾರೆ. ಹೀಗೆ ಕಟ್ಟುತ್ತಿರುವಾಗ ಗುಡಿ ಮೇಲ್ಛಾವಣಿಗೆ ಬಂದಾಗ ಒಬ್ಬನ ಮೈಮೇಲೆ ದೇವರು ಆವಾಹಿಸಿಕೊಂಡು ಗ್ರಾಮದ ಹಾಗೂ ದೇವಿಯ ನಡುವೆ ಮಾತುಕತೆ ನಡೆದು ಕೊನೆಗೆ ಮಂಚಮ್ಮ ನಿಮಗೆಲ್ಲ ಮನೆಯಾಗುವವರೆಗೂ ನನಗೂ ಮನೆ ಬೇಡ ಎಂದಳು. ಆದ್ದರಿಂದ ಮಂಚಮ್ಮ ಮನೆಮಂಚಮ್ಮಳಾದಳು.
21. ಎತ್ತುಗಳ ಘಂಟೆಯ ಶಬ್ದವನ್ನು ಕೇಳಿದ ಹುಲಿಯು ಕೆಲವು ನಿಮಿಷ ತಡೆದು ನೋಡಿ ಆದರೆ ರೈತರ ಮಾತು ಕೇಳಬಂದ ಮೇಲಂತೂ ನಿರಾಶೆಯೂ ಹಾಗೂ ಕೋಪದಿಂದಲೂ ಗಳ ಪಲಾಯನ ಮಾಡಿತು.

(22) 'ಕರ್ಣ ನಿಮಗೂ, ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನೀನು ನಿಜವಾಗಿ ಭೂಮಿಯ ಒಡೆಯ. ಆದರೆ ನಿನಗೆ ಅದರ ಅರಿವಿಲ್ಲ." ಎಂದು ಹೇಳುವ ಕೃಷ್ಣನು ಕರ್ಣನ ಹೃದಯದಲ್ಲಿ ಭಯವನ್ನು ಬಿತ್ತಿದನು.

(23) ಅರ್ಜುನ ಹಾಗೂ ಭೀಮರಿಬ್ಬರನ್ನು ಕೊಂದ ಬಳಿಕವೇ ಧರ್ಮರಾಯನೊಂದಿಗೆ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳಿದನು. ಆವರಿಬ್ಬರು ನನ್ನ ಸ್ನೇಹಿತ ಹಾಗೂ ತಮ್ಮನನ್ನು ಸಾಯಿಸಿದ್ದಾರೆ.

(24) ನಾವು ಪ್ರತಿಯೊಬ್ಬರೂ ಒಂದೇ ಮಾರ್ಗ ಅನುಸರಿಸಬೇ. ಧರ್ಮ ಆ ಹಾಗೂ ಆಧ್ಯಾತ್ಮಿಕ ಭಾವನೆಯನ್ನು ನಾಶಗೊಳಿಸದೇ ಎಲ್ಲಾ ಧರ್ಮಗಳನ್ನು ಗೌರವಿಸುವುದೇ ಜೀವನದ ರಹಸ್ಯ ಎಂದಿದ್ದಾರೆ.

(25) ವಸಂತ ಮುಖ ತೋರಲಿಲ್ಲ ಪದ್ಯದಲ್ಲಿ - ಮೈತುಂಬಿ ನಿಂತ ಮಾವಿನ ಹೂ ಮರಗಳು, ರೆಕ್ಕೆ ಬಿಚ್ಚಿ ಹಾರಾಡುವ ಪಕ್ಷಿಗಳು, ಮತ್ತೆ ಮನತುಂಬಿ ಹಾಡುವ ಕೋಗಿಲೆಗಳು, ಕಡಲುಕ್ಕಿ ಹರಿಯುವ ಸಂಭ್ರಮ' ಹೀಗೆ ಪ್ರಕೃತಿಯನ್ನು ವರ್ಣಿಸಿದ್ದಾರೆ.

(26) ಮೃಗ ಹಾಗೂ ಮನುಷ್ಯರಲ್ಲಿರುವ ವ್ಯತ್ಯಾಸದ ಕುರಿತಾಗಿ, 'ಮೃಗ ಒಳ್ಳೆಯ ಹೃದಯ ಹೊಂದಿದ್ದರೂ ಮೃಗದ ಆಕಾರ ಹೊಂದಿರುವುದು ಸಹಜ. ಆದರೆ ಜಗತ್ತಿನ ಅನೇಕ ಮನುಷ್ಯರು ಸುಂದರ ಆಕಾರ ಪಡೆದು ~~ಮನುಷ್ಯ~~ ಮೃಗದ ಹೃದಯ ಹೊಂದಿರುತ್ತಾರೆ.' ಎಂದು ಹೇಳಿದ್ದಾಳೆ.

(27) ಬೀಸುವ ಕಲ್ಲನ್ನು ಬೀಸುವಾಗ ~~ಕೈಗಳ~~ ಹಾಕಿದ ಕಾಳುಗಳು ಪುಡಿಯಾಗಿ ಬೀಳುವ - ದನ್ನು ಇಲ್ಲಿ ಕಕ್ಕುವುದು ಎಂದೂ, ಹಾಕುವ ಕಾಳುಗಳನ್ನು ಇಲ್ಲಿ ಬಾಯಲ್ಲಿ ತಿಂಬುದು ಎಂದು ವರ್ಣಿಸಿದ್ದಾರೆ.

V (28) ಎ.ಎನ್. ಮೂರ್ತಿರಾವ್ 1900 ಅಕ್ಕಿಹೆಬ್ಬಾಳು ಎಂಬಲ್ಲಿ ಜನಿಸಿದರು
* ಹಗಲುಗನಸುಗಳು * ಅಲೆಯುವ ಮನ, * ಅಪರವಯಸ್ಕನ ಅಮೆರಿಕಾಯಾತ್ರೆ, * ಶಾನಿ * ಮಿನುಗು ಮಿಂಚು ಕೃತಿಗಳು. ಚಿತ್ರಗಳು-ಪತ್ರಗಳು ಎಂಬ ಕೃತಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ದೇವರು ಕೃತಿಗೆ ಪಂಪ ಪ್ರಶಸ್ತಿ

(29) ಕುವೆಂಪು 1904 ಡಿಸೆಂಬರ್ 29 - ಕೊಳಲು, ಪಾಂಚಜನ್ಯ, ಪ್ರೇಮ ಕಾಶ್ಮೀರ, ಪಕ್ಷಿಕಾಶಿ, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಜಲಗಾರ, ಯಮನ ಸೋಲು ಇನ್ನು ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ, ಪಂಪ ಪ್ರಶಸ್ತಿ ದೊರೆತಿವೆ.

VI (30) ಭ ರ ನ ಭ ಭ ರ ಲ ಗು.

ಕೋಗಿಲೆಯೊಹೋಗಿ ಪಟ್ಟುವುದು ನಂದನದೊಳ್ ವನವಾಸಿ ದೇಹದೊಳ್

ಉತ್ಪಲಮಾಲಾವೃತ್ತ.

VII (೩೨) ಉಪಮೇಯ - ರಾಮಲಕ್ಷ್ಮಣರು.

ಉಪಮಾನ - ಅಶ್ವಿನಿ ದೇವತೆಗಳು.

ವಾಚಕಪದ :- ಅಂತೆ.

ಸಮಾನಧರ್ಮ :- ಶೋಭಿಸುವರು

ಸಮನ್ವಯ :- ಉಪಮೇಯವಾದ ರಾಮಲಕ್ಷ್ಮಣರನ್ನು ಉಪಮಾನವಾದ ಅಶ್ವಿನಿದೇವತೆಗಳಿಗೆ ಹೋಲಿಸಲಾಗಿದೆ. ವಾಚಕ ಪದ ಅಂತೆ ಸಮಾನಧರ್ಮ ಶೋಭಿಸುವರು ಎಂಬ ಪದಗಳು ಬಂದಿವೆ

ಇದು ಉಪಮಾಲಂಕಾರ

ಲಕ್ಷಣ :- ಎರಡು ವಸ್ತುಗಳ ನಡುವೆ ಪರಸ್ಪರ ಹೋಲಿಸಿ ವರ್ಣಿಸುವುದೇ ಉಪಮಾಲಂಕಾರ.

(೩೩) ಮಹತ್ವ :- ಗಾದೆಗಳು ಜನಪದ ಸಾಹಿತ್ಯದ ಒಂದು ಪ್ರಕಾರ. ಗಾದೆಗಳಿಂದ ಜೀವನ ಮೌಲ್ಯ ಹೆಚ್ಚುತ್ತದೆ. ಅದ್ದರಿಂದಲೇ 'ವೇದ ಸುಳ್ಳಾದರೂ, ಗಾದೆ ಸುಳ್ಳಾಗದು' ಗಾದೆಗಳನ್ನು ವೇದಕ್ಕೆ ಸಮಾನ' ಎಂದು ಹೇಳುವುದು. ಅಂತಹ ಒಂದು ಗಾದೆಗಳಲ್ಲಿ ಇದೂ ಕೂಡ ಒಂದು.

ಬೆಳೆಯುವ ಸಿರಿ ಮೊಳಕೆಯಲ್ಲೇ ಅದು ಮುಂದೆ ಎಂತಹ ಬೆಳೆಯನ್ನು ಕೊಡುತ್ತದೆ ಎಂದು ತಿಳಿಯುತ್ತದೆ. ಹಾಗೆಯೇ ಬಾಲ್ಯದಲ್ಲಿ ಮಕ್ಕಳ ನಡೆನುಡಿಗಳನ್ನು ಗಮನಿಸಿದರೆ ಮುಂದೆ ಅವರು ಏನಾಗುತ್ತಾರೆ ಎಂಬುದನ್ನು ಊಹಿಸಬಹುದು. ಕ್ರಿಕೆಟ್ ಆಟಗಾರ ಸಚಿನ್ ಜೀವನವೇ ಇದಕ್ಕೊಂದು ಉತ್ತಮ ಉದಾಹರಣೆ. ಮೊಳಕೆ ಚೆನ್ನಾಗಿದ್ದರೆ. ಬೆಳೆ ಚೆನ್ನಾಗಿರುತ್ತದೆ ಅದೇ ರೀತಿ ಮಕ್ಕಳು ಬಾಲ್ಯದಲ್ಲಿ ಉತ್ತಮ ಗುಣ ಬೆಳೆಸಿಕೊಂಡರೆ ಮುಂದೆ ಅವರು ಉತ್ತಮ ವ್ಯಕ್ತಿಗಳಾಗುತ್ತಾರೆ. ಎಂಬುದೇ ಇದರ ಅರ್ಥ.

IX (೩೫) ಆಯ್ಕೆ :- ಪ್ರಸ್ತುತ ಈ ವಾಕ್ಯವನ್ನು ಡಿ.ಎಸ್ ಜಯಪ್ಪಗೌಡ ರಚಿಸಿರುವ 'ದಿವಾನ್ ಎಂ ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಕೃತಿಯಿಂದ ಆಯ್ದ 'ಭಾಗ್ಯ ಶಿಲ್ಪಿಗಳು' ಎಂಬ ಗದ್ಯ ಪಾಠದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ :- ಈ ನಾಲ್ವಡಿ ಕೃಷ್ಣರಾಜ ಒಡೆಯರು ಸರ್ ಎಂ.ವಿ ಅವರು ಸಾಮಾಜಿಕ ಕಾನೂನುಗಳನ್ನು ಜಾರಿಗೆ ತಂದಿರುವುದನ್ನು ತಿಳಿಸುವ ಸಂದರ್ಭದಲ್ಲಿ ~~[illegible]~~ ನಾಡಿನ ಏಳಿಗೆಗಾಗಿ ಶ್ರಮಿಸಿ ವಿಚಾರ ವ್ಯಕ್ತಪಡಿಸುತ್ತಾ ತಿಳಿಸಿದ್ದಾರೆ.

ಸ್ವಾರಸ್ಯ :- ನಾಡಿನ ಅಭಿವೃದ್ಧಿಗೆ ಅವರು ಜಾರಿಗೆ ತಂದಿರುವ ಕಾನೂನುಗಳ ಅಂಶವು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

(34) ಆಯ್ಕೆ :- ಈ ವಾಕ್ಯವನ್ನು ದುರ್ಗಸಿಂಹನು ರಚಿಸಿರುವ 'ಕರ್ನಾಟಕ ಪಂಚತಂತ್ರ' ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ' ಎಂ ಕೃತಿಯಿಂದ ಆಯ್ದ ವೃಕ್ಷಸಾಕ್ಷಿ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :- ದುಷ್ಟಬುದ್ಧಿ ತನ್ನ ಮನೆಗೆ ಬಂದು ತನ್ನ ತಂದೆಯ ಕೈ ಹಿಡಿದು ಏಕಾಂತ ಸ್ಥಳಕ್ಕೆ ಕರೆದುಕೊಂಡು ಹೋಗಿ, "ನೀನು ಆ ಮರದ ಪೊಟರೆಯಲ್ಲಿ ಅಡಗಿದ್ದು 'ಧರ್ಮಬುದ್ಧಿಯೇ ಹೊನ್ನು ತೆಗೆದುಕೊಂಡು ಹೋದನೆಂದು ಹೇಳು" ಎಂದು ಹೇಳಿದ ಸಂದರ್ಭದಲ್ಲಿ ಅವನಿಗೆ ಬುದ್ಧಿ ಹೇಳುತ್ತ, ತಂದೆಯು ಈ ಮಾತು ಹೇಳುತ್ತಾನೆ.

ಸ್ವಾರಸ್ಯ :- ದುಷ್ಟಬುದ್ಧಿಯನ್ನು ಕುರಿತು ಅವನ ತಂದೆಯು "ನಿನ್ನ ಕೆಟ್ಟತನ ನಮ್ಮ ಕುಲವನ್ನು ನಾಶಮಾಡುವ ರೀತಿಯಾಗಿದೆ" ಎಂದು ಹೇಳುವುದು ಸ್ವಾರಸ್ಯಪೂರ್ಣವಾಗಿದೆ.

(35) ಆಯ್ಕೆ :- ಶಿವಕೋಟ್ಯಾಚಾರ್ಯರು ಬರೆದಿರುವ ವಡ್ಡಾರಾಧನೆ ಕೃತಿಯಿಂದ ಆಯ್ದ ಸುಕುಮಾರಸ್ವಾಮಿಯ ಕತೆ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :- ಸುಕುಮಾರನ ತಾಯಿಯು ಮಗನ ಆತನ ವೈಭವ ಗುಣ-ನಡತೆಗಳನ್ನು ಆತನು ಅನುಭವಿಸುತ್ತಿದ್ದ ಸುಖಭೋಗಗಳನ್ನು ಕೇಳಿದ ಕೂಡಲೇ ಸ್ವತಃ ರಾಜನೇ ಈತನ ಒಂದು ಕ್ಷಣದ ಸುಖ-ಭೋಗಗಳಿಗೆ ನನ್ನ ಇಡೀ ಆಯುಷ್ಯದ ಕಾಲದಲ್ಲಿ ಅನುಭವಿಸಿದ ಭೋಗ ? ಉಪಭೋಗಗಳು ಸಮನಾಗುವುದಿಲ್ಲ. ಇದರಿಂದ ಲೋಕದಲ್ಲಿ ನಿಜವಾಗಿಯೂ ಈತನೇ 'ಸುಖಿ' ಎಂದು ಸಂತಸಗೊಂಡ ಸಂದರ್ಭದಲ್ಲಿ ಹೇಳಿದ ಮಾತು.

ಸ್ವಾ :- ಸ್ವತಃ ರಾಜನೇ ಸುಕುಮಾರಸ್ವಾಮಿಯ ವೈಭವವನ್ನು ಮೆಚ್ಚಿ ಈತನ ವೈಭವದ ಮುಂದೆ ತನ್ನ ವೈಭವ ಏನೇನೂ ಅಲ್ಲ ಎಂದು ಅವನಿಗೆ ಅವಂತಿ ಸುಕುಮಾರನೆಂದು ಹೆಸರಿಡುವುದು ಇಲ್ಲಿಯ ಸ್ವಾರಸ್ಯ.

(36) ಆಯ್ಕೆ :- ಜಿ.ಎಸ್. ಶಿವರುದ್ರಪ್ಪ ಅವರು ರಚಿಸಿರುವ ಎದೆ ತುಂಬಿ ಹಾಡಿದೆನು ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಕವಿತೆಯಿಂದ ಆರಿಸಲಾಗಿದೆ.

ಸಂದರ್ಭ :- ಕವಿಯು ಇಲ್ಲಿ ಧನಾತ್ಮಕ ಮನೋಭಾವನೆಂಬ ದೃಢಸಂಕಲ್ಪ ಹೊಂದಿರಬೇಕೆಂಬುದನ್ನು ಹೇಳುವ ಸಂದರ್ಭದಲ್ಲಿ ಈ ಮಾತು ಹೇಳುತ್ತಾರೆ.

ಸ್ವಾರಸ್ಯ :- ಬರಡಾಗಿರುವ ಕಾಡುಮೇಡುಗಳಲ್ಲಿ ಮಳೆಯಾದರೆ ಕಾಡುಮೇಡುಗಳು ಚಿಗುರಿ ವಸಂತವಾಗಿ ಬಾಡಿರುವ (ಕುಂದಿರುವ) ಮನಸುಗಳಲ್ಲಿ ಭರವಸೆ ತುಂಬಬಹುದೆಂಬುದು ಇಲ್ಲಿಯ ಸ್ವಾರಸ್ಯವಾಗಿದೆ.

(39) ಆಯ್ಕೆ - ಈ ವಾಕ್ಯವನ್ನು ದ.ರಾ. ಬೇಂದ್ರೆ ಅವರು ರಚಿಸಿರುವ 'ಗರಿ' ಕವನ ಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂ:- ದ.ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಕ್ಕಿಗೆ ಹೋಲಿಸಿಕೊಂಡು ವರ್ಣಿಸುವ ಸಂದರ್ಭದಲ್ಲಿ ಕಾಲವೆಂಬ ಹಕ್ಕಿ ರಾಜ್ಯ ಸಾಮ್ರಾಜ್ಯಗಳನ್ನು ಬಡಿದು ಮಂಡಲ ಮಂಡಲಗಳನ್ನು ಮುಕ್ಕಿ ಹಾಕಿ ಖಂಡಗಳನ್ನೇ ತೇಲಿಸಿ ಮುಳುಗಿಸಿದೆ ಎಂದು ತಿಳಿಸುವ ಸಂದರ್ಭದಲ್ಲಿ ತಿಳಿಸಿದ್ದಾರೆ.

ಸ್ವಾರಸ್ಯ:- ಕಾಲದ ಗತಿಯಲ್ಲಿ ವೈಭವ, ಅಹಂಕಾರದಿಂದ ಮೆರೆದ ಸಾರ್ವಭೌಮರೆಲ್ಲ ನಾಮಾವಶೇಷವಾಗಿದ್ದಾರೆ ಅಲ್ಲದೇ ಖಂಡಗಳು ಸಹ ತೇಲಿ ಮುಳುಗಿ ಹೋಗಿವೆ ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

(40) (38) ಈ ಆಯ್ಕೆ - ಕುಮಾರವ್ಯಾಸ ರಚಿಸಿದ . ಕರ್ಣಾಟ ಭಾರತ ಕಥಾಮಂಜರಿ ಕಾವ್ಯ ಉದ್ಯೋಗ ಪರ್ವದ 'ಕೌರವೇಂದ್ರನ ಕೊಂದೆ ನೀನು' ಕಾವ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:- ಕೃಷ್ಣನು ಕರ್ಣನ ಬಳಿ ಸಂಧಾನಕ್ಕಾಗಿ ಬಂದ ಸಂದರ್ಭದಲ್ಲಿ ಪಾಂಡವರ ಜನ್ಮದ ವಿಚಾರವನ್ನು ತಿಳಿಸುವ ಸಂದರ್ಭದಲ್ಲಿ ಮಾದ್ರಿ ಅಶ್ವಿನಿ-ದೇವತೆಗಳ ಕೃಪೆಯಿಂದ ಜನಿಸಿದ ನಕುಲ ಸಹದೇವರ ಬಗ್ಗೆ ಹೇಳುತ್ತಾ ಈ ಮಾತು ಹೇಳಿದನು.

ಸ್ವಾರಸ್ಯ:- ಮಾದ್ರಿಗೆ ಅಶ್ವಿನಿ-ದೇವತೆಗಳ ಕೃಪೆಯಿಂದ ನಕುಲ-ಸಹದೇವರು ಜನಿಸಿದರು ಎಂಬುದು ಇಲ್ಲಿಯ ಸ್ವಾರಸ್ಯವಾಗಿದೆ.

X

(39) ಕೂಡಲ ಕೋಲೆ ಹುಡಿ ಕಣ್ಣಿಗೆ ನೋವಿಲ್ಲ ಬೆಳ್ಳೆ ಹಾಲಾ
ಹಬ್ಬು ಎಲ್ಲಿ ಅಂತಿಗ ಜೀರಿಗೆ ಅಕ್ಕಿ ಸಕ್ಕರೆ ಬೆಲ್ಲಾ
ರಂಗಳ ಚೂರಿ ಮಂಗಳ ಸಾತ್ರ ಹೋದವು ಸಾಸುಕಲ್ಲಿ
ಹಾಸಿಗೆ ಹೋಯಿತು ಅತ್ತ ವಾರ್ಗಿ ಹೇಳಲಿ ನಾನೆಷ್ಟು

XI

(40) ವೀರಲವನು ಶ್ರೀರಾಮನು ಬಿಟ್ಟಿದ್ದ ಅಶ್ವಮೇಧಯಾಗದ ಕುದುರೆಯನ್ನು ಕಟ್ಟಿ ಹಾಕುವ ಸಂದರ್ಭದಲ್ಲಿ - ತಾ.ಲವ ಲವನು ತನ್ನ ಉತ್ತರೀಯವನ್ನು ತೆಗೆದು ಕುದುರೆಯನ್ನು ಹಿಡಿದು ಕದಳಿ (ಬಾಳೆ) ಗಿಡಕ್ಕೆ ಕಟ್ಟಲು, ಮುನಿಸುತರು ಭಯಗೊಂಡು, ಬೇಡ ಬೇಡ ಅರಸುಗಳ ಕುದುರೆಯನ್ನು ಬಿಡು. ನಮ್ಮನ್ನು ಬಯ್ಯುವರು ಎನಲು, ಲವನು ನಗುತ್ತ ಬ್ರಾಹ್ಮಣರ ಮಕ್ಕಳು ಅಂಜಿದರೆ ಜಾನಕಿಯ ಮಗನು ಇದಕ್ಕೆ ಹೆದರುವನೆ ಹೋಗಿ, ನೀವು ಎಂದು ಲವನು ತನ್ನ ಬಿಲ್ಲಿನ ಹೆದೆ ಏರಿಸಿ ಸಿದ್ಧನಾಗಿ ನಿಂತಿದ್ದನು.

× XII

(41) ಪೇಟೆಯಲ್ಲಿ ತಿರುಗಾಡಿದೆ. 'ವೂಲವರ್ಥ್' ಎಂಬ 'ಸ್ಟೇಷನರಿ' ಅಂಗಡಿಯು ನೋಡುವ ಹಾಗಿದೆ. ಎಲ್ಲ ತರದ ಸಾಮಾನುಗಳನ್ನು ಇಲ್ಲಿ ಒಂದು ಪೆನ್ನಿಯಿಂದ ಆರು ಪೆನ್ನಿಯವರೆಗೆ ಮಾರುತ್ತಾರೆ. ಈ ಅಂಗಡಿಯ ವಿಧವಿಧದ ವಿಭಾಗಗಳನ್ನು ನಿರ್ಮಿಸಿದ ಬುದ್ಧಿಯ ಚಮತ್ಕಾರವು ನೋಡತಕ್ಕಂತಹುದು. ಪ್ರಾಚೀನ ಮಹಾಕಾವ್ಯದಂತೆ ಇದೊಂದು ಮಹಾಕೋಶವಾಗಿದೆ. ಬೂಟು, ಕಾಲುಚೀಲ, ಚಿತ್ರ, ಸಾಬೂನು, ಔಷಧ, ಪುಸ್ತಕ, ಅಡುಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ, ಅಡವಿಯ ಹೂವು, ಯುದ್ಧಸಾಮಗ್ರಿ ಎಲ್ಲವೂ ಇಲ್ಲಿ ದೊರೆಯುತ್ತದೆ.

'ಅಮ್ಮಣ್ಣಿ'ಗಳಿರುತ್ತಾರೆ. ಯಾವುದಾದರೊಂದು ದೊಡ್ಡ ಅಂಗಡಿಗೆ ಹೋದರೆ ಅಲ್ಲಿಯ ಟೈಪಿಸ್ಟ್ ಕಾರಕೂನ, ಒಬ್ಬ ಹೆಣ್ಣು ಮಗಳು. ಸಿನಿಮಾ ಗೃಹದಲ್ಲಿ ನಿಮ್ಮ ಜಾಗವನ್ನು ಹುಡುಕಿಕೊಡುವವರು ಹೆಣ್ಣು! ನಮ್ಮ ಕಾಲೇಜಿನಲ್ಲಿ ಸಹ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಸಿಪಾಯಿಣಿಯರನ್ನು ಇಟ್ಟಿದ್ದಾರೆ! ಹೆಣ್ಣು ಮಕ್ಕಳನ್ನು ಅತ್ಯಾದರದಿಂದ ನಡೆಸಿಕೊಳ್ಳುವ ಸಂಸ್ಕೃತಿಯ ಶಿಖರವನ್ನು ಇಂಗ್ಲೆಂಡಿನಲ್ಲಿಯೇ ಕಾಣಬೇಕೆಂದು ಆಂಗ್ಲರ ಮತ ಇದೀಗ ಹೆಣ್ಣನ್ನು ಸತ್ಕರಿಸುವ ರೀತಿಯಿದು.

(42) ತನ್ನ ಒಡನಾಡಿಯೂ ಗೆಳೆಯನೂ ಆದ ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಾನೆಂದು ಕೇಳಿ, ದ್ರೋಣನು ಆ ಪಟ್ಟಣಕ್ಕೆ ಬಂದು ದ್ರುಪದನ ಅರಮನೆಯ ಬಾಗಿಲಲ್ಲಿ ನಿಂತು. ದ್ವಾರಪಾಲಕನನ್ನು ಕರೆದು. "ನಿಮ್ಮ ಗೆಳೆಯನಾದ ದ್ರೋಣ ಎಂಬ ಬ್ರಾಹ್ಮಣನು ಬಂದಿದ್ದಾನೆ ಎಂದು ನಿಮ್ಮ ರಾಜನಿಗೆ ತಿಳಿಸು" ಎಂದು ಹೇಳಲು ಆ ಸೇವಕನು ಆ ರೀತಿಯಲ್ಲಿಯೇ ಬಂದು ರಾಜನಿಗೆ ತಿಳಿಸಿದನು. "ಅವನು ನನಗೆ ಹೇಗೆ ಗೆಳೆಯನು? ಅಂತಹವನನ್ನು ನಾನು ತಿಳಿಯೆನು. ಅವನನ್ನು ಹೊರಗೆ ನೂಕು" ಎಂದು ದ್ರುಪದನು ಸಭಾಮಧ್ಯದಲ್ಲಿ ಕೆಟ್ಟದಾಗಿ ಮಾತನಾಡಿದನು. ಆಗ ದ್ರೋಣನು ಒತ್ತಾಯದಿಂದ ಅರಮನೆಯನ್ನು ಪ್ರವೇಶಿಸಿ ದ್ರುಪದನನ್ನು ಕುರಿತು, "ಅಣ್ಣಾ, ನೀವೂ ನಾವೂ ಜೊತೆಯಲ್ಲಿ ಓದಿದ್ದೇವೆ ಎಂಬುದನ್ನು ತಿಳಿದಿಲ್ಲವೇ ?" ಎಂದಾಗ ದ್ರುಪದನು, "ನಿನ್ನನ್ನು ನಾನು ತಿಳಿಯೆನು, ನನ್ನನ್ನು ನೀನು ಎಲ್ಲಿ ಕಂಡಿದ್ದೀಯೋ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಗೆಳೆತನ? ಹೀಗೆ ಮನುಷ್ಯರಾದವರು ನಾಚಿಕೆಯಿಲ್ಲದವರಾಗುತ್ತಾರೆಯೇ? ಎಂದು ದ್ರೋಣನಿಗೆ ಮರ್ಮಭೇದಕವಾಗುವಂತೆ ತೀವ್ರವಾದ ನಾಚಿಕೆ ಈಡಾಗುವಂತೆ ಮಾಡಿದನು. ಆಗ ದ್ರೋಣನು ದ್ರುಪದನನ್ನು ಕುರಿತು, "ಎಲೈ ದುಷ್ಟನೇ, 'ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠವಾದದು' ಎಂಬಂತೆ ನಿನ್ನ ಪರಾಕ್ರಮ ನನ್ನವರೆಗೂ ಉಂಟೇ? ಜೊತೆಯಲ್ಲಿ ಓದಿದೆವು ಎಂಬ ಕಾರಣದಿಂ ನಿನ್ನನ್ನು ಕೊಲ್ಲುವುದಿಲ್ಲ. ಈ ಸಭಾವಲಯದಲ್ಲಿ ನನ್ನನ್ನು ಹೀಯಾಳಿಸಿದ ನಿನ್ನನ

ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿಪಡುವಂತೆ ಕಟ್ಟಿಸದೇ ಬಿ
ನಾನು ಸುಮ್ಮನೇ ಬೀಸಿ ಹೊತ್ತಿರುವೆನೇ? ಅದು ವ್ಯರ್ಥವಲ್ಲವೇ? ಎಂದು
ಪ್ರತಿಜ್ಞೆ ಮಾಡುತ್ತಾನೆ.

(3) ಅ. ಧರ್ಮವೆಂದರೆ ಅಗ್ರಾಹ್ಯವಾದ ಜಟಿಲ ಜಾಲವಲ್ಲ, ಒಂದು ವರ್ಗದ
ಸ್ವತ್ತಲ್ಲ. ಎಲ್ಲರ ಆಸ್ತಿಯಾಗಬೇಕು. ಎಲ್ಲರ ಅಭ್ಯುದಕ್ಕೆ ಕಾರಣವಾಗಬೇಕ
ಎಂಬುದು ಬಸವಣ್ಣನವರ ನಿಲುವು ಆಗಿತ್ತು.

ಬ. ಸತ್ಯ ಅಹಿಂಸೆಗಳ ಅನುಷ್ಠಾನ, ಜಾತಿ ನಿರ್ಮೂಲನೆ, ಅಸ್ಪೃಶ್ಯತಾ ನಿವಾರ
ಇಂದಿಗೂ ಅವಶ್ಯವೂ, ಅನಿವಾರ್ಯವೂ ಆಗಿದೆ. ಆದ್ದರಿಂದಲೇ ಬಸವಣ್ಣನ
ಜಗತ್ತಿನ ಯಾವ ಕ್ರಾಂತಿಕಾರಿಗೂ ಮಿಗಿಲಾಗಿ ಕಾಣುತ್ತಾರೆ.

XIV 14

ದಿನಾಂಕ
02.03.2020

ಇಂದ,
ರಾಧಿಕಾ,
ಸರ್ಕಾರಿ ಪ್ರೌಢಶಾಲೆ
ಚಿಕ್ಕಮಗಳೂರು.

ಗೆ,
ವ್ಯವಸ್ಥಾಪಕರು
~~[illegible]~~
ನೆಹರು ತಾರಾಲಯ,
ಬೆಂಗಳೂರು.

ಮಾನ್ಯರೇ,

ವಿಷಯ:- ತಾರಾಲಯದ ವೀಕ್ಷಣೆಗೆ ಸಮಯಾವಕಾಶ ಕೋರಿ.

ಮೇಲೆ ತಿಳಿಸಿದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ನಮಗೆ ತಾರಾಲಯ ವೀಕ್ಷಣೆ ಮಾಡಬೇಕೆಂಬ ಬಯಕೆ ತುಂಬಾ ದಿನಗಳಿಂದ ಇದ್ದು ಆದರೆ ಸಮಯದ ~~ಅಭಾವ~~ ಅವಕಾಶವು ತಮ್ಮಲ್ಲಿ ಕಡಿಮೆ ಇದ್ದು ಇದೇ ಕಾರಣ ವೀಕ್ಷಣೆ ಅಸಾಧ್ಯವಾಗಿದೆ. ಆದ್ದರಿಂದ ಸಮಯವನ್ನು ಸ್ವಲ್ಪ ಹೆಚ್ಚಿಗೆ ತಾರಾಲಯ ವೀಕ್ಷಣೆಗೆ ಅವಕಾಶ ಕಲ್ಪಿಸಬೇಕೆಂದು ತಮ್ಮ ವಿನಂತಿಸುತ್ತೇನೆ.

ವಂದನೆಗಳೊಂದಿಗೆ,

ದಿನಾಂಕ:- 02.03.2020.

ತಮ್ಮ ವಿಶ್ವಾಸಿ
ರಾಧಿಕಾ.

XV. (45) ನಭದಲ್ಲಿ ರಾರಾಜಿಸುತ್ತಿರುವ ನವ ಭಾರತದ ನಿರ್ಮಾಣವನ್ನು ಬಾಹ್ಯಾಕಾಶದ ಅಂಗಳದಲ್ಲಿ ನೋಡಬಹುದು. ಚಂದ್ರಯಾನವನ್ನು ಕೈಗೊಂಡು ಯಶಸ್ಸು ಸಾಧಿಸಿದ ವಿಶ್ವದ ನಾಲ್ಕು ರಾಷ್ಟ್ರಗಳಲ್ಲಿ ಭಾರತವು ನಾಲ್ಕನೆಯದು. ಮೊದಲ ಮೂರು ರಾಷ್ಟ್ರಗಳೆಂದರೆ ಯು.ಎಸ್.ಎ, ಯು.ಎಸ್.ಎಸ್.ಆರ್ ಮತ್ತು ಚೀನಾ. ಭಾರತವು ತನ್ನ ಮೊಟ್ಟ ಮೊದಲ ಚಂದ್ರಯಾನವನ್ನು ಅಕ್ಟೋಬರ್ 2008 ರಲ್ಲಿ ಕೈಗೊಂಡು ಯಶಸ್ಸು ಸಾಧಿಸುವ ಮೂಲಕ ಇಡೀ ವಿಶ್ವ ಭಾರದತ್ತ ತಿರುಗಿ ನೋಡುವಂತೆ ಮಾಡಿತ್ತು. ಚಂದ್ರಯಾನ-1 ಕೇವಲ 312 ದಿನಗಳ ಕಾಲ ಕಾರ್ಯನಿರ್ವಹಿಸಿದರೂ ಸಹ, ತನ್ನ ಯೋಜಿತ ಉದ್ದೇಶಗಳ ಪೈಕಿ 95% ರಷ್ಟನ್ನು ಸಾಧಿಸಿತು. ಅದೇ ರೀತಿ ಭಾರತವು ಮತ್ತೆ ಚಂದ್ರಯಾನ-2ರ ಮೂಲಕ ಬಾಹ್ಯಾಕಾಶದತ್ತ ಹೊಸ ಹೆಜ್ಜೆ ಇಟ್ಟಿದೆ.

ಭಾರತವೂ ಸಂಪೂರ್ಣ ಸ್ವತಂತ್ರವಾಗಿ ಅಭಿವೃದ್ಧಿ ಪಡಿಸಿದ ಅಭಿಯಾನವು ಇದಾಗಿದ್ದು, MK - III (GSLV)ನ ಮೂಲಕ ಶ್ರೀಹರಿಕೋಟ ದ್ವೀಪದ ಮೇಲಿರುವ ಸತೀಶ್ ಧವನ್ ಸ್ಪೇಸ್ ಸೆಂಟರ್ ನಿಂದ ಉಡಾವಣೆ ಮಾಡಲಾಯಿತು. ಚಂದ್ರಯಾನ-2ರ ನೌಕೆಯನ್ನು ಹೊತ್ತ ರಾಕೆಟ್ 'ಬಾಹುಬಲಿ' 22-7-2019 ಸೋಮವಾರ ಮಧ್ಯಾಹ್ನ 2.43ಕ್ಕೆ ಶ್ರೀಹರಿಕೋಟಾದ ಸತೀಶ ಧವನ್ ಬಾಹ್ಯಾಕಾಶ ಕೇಂದ್ರದಿಂದ ಯಶಸ್ವಿಯಾಗಿ ನಭಕ್ಕೆ ಹಾರಿತು. ಇಸ್ರೋ ನಿರ್ಮಿತ ಅತ್ಯಂತ ಬಲಶಾಲಿ ರಾಕೆಟ್, ಜಿಎಸ್‌ಎಲ್‌ವಿ ಮಾರ್ಕ್-3 'ಬಾಹುಬಲಿ'ಯು 3,850 ಕೆ.ಜಿ. ತೂಕದ ಉಪಕರಣಗಳನ್ನು ಭೂಮಿಯಕಕ್ಷೆಗೆ ಸೇರಿಸಿತು. "ವಿಕ್ರಂ ಲ್ಯಾಂಡರ್" 7 ಸೆಪ್ಟಂಬರ್ 2019 ರಂದು ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿಯಿತು. ಪ್ರಜ್ಞಾನ್ ರೋವರ್ ಚಂದ್ರನ ಮೇಲೆ ಇಳಿದು ಕಾರ್ಯಾಚರಣೆ ನಡೆಸುತ್ತದೆ.

ಚಂದ್ರಯಾನ-2 ಉದ್ದೇಶವೇನು?: ಚಂದ್ರನ ಮೇಲ್ಮೈನ ವಿಶ್ಲೇಷಣೆ, ಸ್ಥಳಾಕೃತಿಯ ವಿವರಣೆ, ವಾತಾವರಣ, ಖನಿಜ ಸಂಪತ್ತು, ಪ್ರಾಕೃತಿಕ ಸಂಪನ್ಮೂಲಗಳು, ಹೈಡ್ರಾಕ್ಸಿಲ್ ಮತ್ತು ನೀರು ಅಥವಾ ಮಂಜು ಎಷ್ಟಿದೆ ಎಂಬುದನ್ನು ಪತ್ತೆಹಚ್ಚುವುದು. ಎಲ್ಲವೂ ಅಂದುಕೊಂಡಂತಾದರೆ ಯಾವ ವಿಜ್ಞಾನಿಗಳೂ ಶೋಧಿಸದ ಅಂಶಗಳನ್ನು ಇಸ್ರೋ ವಿಜ್ಞಾನಿಗಳು ಶೋಧಿಸಿದ ಹೆಗ್ಗಳಿಕೆಯೂ ನಮ್ಮದಾಗುತ್ತದೆ. ಜೊತೆಗೆ ಲಭ್ಯವಿರುವ ಖನಿಜದ ಕುರಿತೂ ಮಾಹಿತಿ ಲಭ್ಯವಾಗಲಿದ್ದು. ಹೈಡೆಫಿನಿಶನ್ ಕ್ಯಾಮೆರಾ ಇರುವುದರಿಂದ ಮಣ್ಣು ಮತ್ತು ಬಂಡೆಗಳ ಸ್ಪಷ್ಟಫೋಟೋಗಳು ದೊರೆಯಲಿವೆ.

ಉಪಸಂಹಾರ:

ಚಂದ್ರಯಾನ-2 ಯೋಜನೆಯಿಂದ ಹೊಸ ಕಾಲದ ಆವಿಷ್ಕಾರಗಳು, ಸಂಶೋಧನೆಗೆ ಸ್ಫೂರ್ತಿ ಸಿಗಲಿದೆ. ಜಾಗತಿಕ ಶಕ್ತಿಶಾಲಿ ರಾಷ್ಟ್ರಗಳು ಭಾರತದೊಂದಿಗೆ ಮತ್ತಷ್ಟು ಉತ್ತಮ ಬಾಂಧವ್ಯ ಬೆಳೆಸುತ್ತದೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದಲ್ಲಿ ಹೆಚ್ಚಿನ ವಾಣಿಜ್ಯ ಅವಕಾಶಗಳ ಬೆಳವಣಿಗೆ

xv. [illegible]

ಆಗಲಿದೆ. ಬಾಹ್ಯಾಕಾಶದ ಕುರಿತು ನಮ್ಮ ಜ್ಞಾನ ಹೆಚ್ಚಳವಾಗುತ್ತದೆ. ತಂತ್ರಜ್ಞಾನದ ಸುಧಾರಣೆ ಮತ್ತು ಮುಂದಿನ ಜನಾಂಗವನ್ನು ಪ್ರೇರೇಪಿಸಿ ಸ್ಫೂರ್ತಿ ತುಂಬುತ್ತದೆ ವಿಶ್ವದ ಯಾವ ರಾಷ್ಟ್ರವೂ ಚಂದ್ರನ ಮತ್ತೊಂದು ಪಾರ್ಶ್ವಮುಖವಾದ ದಕ್ಷಿಣ ಧ್ರುವವನ್ನು ಅಧ್ಯಯನ ಮಾಡಿಲ್ಲ. ಹಾಗಾಗಿ ಚಂದ್ರಯಾನ-2 ಇದೇ ಮೊದಲ ಬಾರಿಗೆ ಚಂದ್ರನ ದಕ್ಷಿಣ ಭಾಗದ ಬಗ್ಗೆ ಅಧ್ಯಯನ ನಡೆಸಲಿದೆ.

XV. (45)

ಆಗಲಿದೆ. ಬಾಹ್ಯಾಕಾಶದ ಕುರಿತು ನಮ್ಮ ಜ್ಞಾನ ಹೆಚ್ಚಾಗುತ್ತದೆ. ತಂತ್ರಜ್ಞಾನ ಸುಧಾರಣೆ ಮತ್ತು ಮುಂದಿನ ಜನಾಂಗವನ್ನು ಪ್ರೇರೇಪಿಸಿ ಸ್ಫೂರ್ತಿ ತುಂಬುತ್ತದೆ. ಈವರೆಗೆ ಯಾವ ರಾಷ್ಟ್ರವೂ ಚಂದ್ರನ ಮತ್ತೊಂದು ಅಸ್ಪೃಶ್ಯವಾದ ದಕ್ಷಿಣ ಧ್ರುವವನ್ನು ಅಧ್ಯಯನ ಮಾಡಿಲ್ಲ. ಹಾಗಾಗಿ ಚಂದ್ರಯಾನ-2 ಇದೇ ಮೊದಲ ಬಾರಿಗೆ ಚಂದ್ರನ ದಕ್ಷಿಣ ಭಾಗದ ಬಗ್ಗೆ ಅಧ್ಯಯನ ನಡೆಸಲಿದೆ.